**ಸಾಕ್ಷಿಯನ್ನು ದಿನಾಂಕಃ 09.02.2023 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಪಾಟೀ ಸವಾಲುಃ ಪ್ರತಿವಾದಿಗಳ ಪರ ಮಾನ್ಯ ಸರ್ಕಾರಿ ವಕೀಲರಿಂದಃ**

ನಾನು ವಾದ ಪತ್ರದ ಷೆಡ್ಯೂಲ್ ನಲ್ಲಿ ಹಳೆಯ ಷೆಡ್ಯೂಲ್ ಗಳನ್ನು ನಮೂದಿಸಿರುವುದಿಲ್ಲ ಎಂದರೆ ಸರಿಯಲ್ಲ. ಹಳೆಯ ಸರ್ವೆ ನಂಬರ್ ಗಳು ಹೊಸ ಸರ್ವೆ ನಂಬರ್ ಗಳಾಗಿ ಬದಲಾವಣೆಯಾಗಿರುವುದಕ್ಕೆ ಆದೇಶ ಪ್ರತಿಯನ್ನು ಹಾಜರುಪಡಿಸಿರುತ್ತೇನೆ. 2003-2004 ರಲ್ಲಿ ನನ್ನ ಹೆಸರಿಗೆ ಖಾತೆ ಬದಲಾವಣೆಯಾಗಿ ಪಹಣಿ ಪತ್ರಿಕೆಗಳು ನನ್ನ ಹೆಸರಿನಲ್ಲಿರುತ್ತವೆ ಎಂದು ತೋರಿಸಲು ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. 2003-2004 ಕ್ಕೆ ಸಂಬಂಧಿಸಿದಂತೆ ಪಹಣಿ ಪತ್ರಿಕೆಗಳನ್ನು ನಾನು ಹಾಜರುಪಡಿಸದಿದ್ದರೂ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸರ್ವೆ ನಂಬರ್. 6/5 ಪಿ ರಲ್ಲಿರುವ ಆಸ್ತಿಯನ್ನು ಜವರಯ್ಯ ಬಿನ್ ಜವರಯ್ಯ ರವರಿಂದ ಖರೀದಿಸಿರುತ್ತೇನೆ. ಸದರಿ ಜವರಯ್ಯ ಕನಕಪುರದವರು. ಕ್ರಯ ಪತ್ರದಲ್ಲಿ ಜವರಯ್ಯ ರವರು ಅಗನಸಹುಂಡಿ ಗ್ರಾಮದವರೆಂದು ಬರೆದಿರುತ್ತಾರೆ ಎಂದರೆ ಸರಿ. ಸದರಿ ಜವರಯ್ಯ ನಮ್ಮ ಗ್ರಾಮದವರೆ ಆಗಿರುತ್ತಾರೆ ಎಂದರೆ ಸರಿ. ಸದರಿ ಜವರಯ್ಯ ಆಸ್ತಿಯನ್ನು ನನಗೆ ಮಾರಾಟ ಮಾಡಿ ಕನಕಪುರಕ್ಕೆ ಹೋಗಿರುತ್ತಾರೆ. ನಮ್ಮ ಗ್ರಾಮದಲ್ಲಿ ಸದರಿ ಜವರಯ್ಯ ರವರ ಕುಟುಂಬಕ್ಕೆ ಸೇರಿದ ಆಸ್ತಿಗಳು ಪ್ರಸ್ತುತ ಇರುವುದಿಲ್ಲ. ನಾನು ಸರ್ವೆ ನಂಬರ್. 6/5 ಪಿ ಗೆ ಸಂಬಂಧಿಸಿದ ಪಹಣಿ ಪತ್ರಿಕೆಯನ್ನು ಹಾಜರುಪಡಿಸಿರುತ್ತೇನೆ. ಸರ್ವೆ ನಂಬರ್.6/5 ಪಿ ಆಸ್ತಿಯ ಪೂರ್ವಕ್ಕೆ -ಮರಿಶೆಟ್ಟಿ ರವರ ಜಮೀನು, ಪಶ್ಚಿಮಕ್ಕೆ- ನಮ್ಮದೇ ಜಮೀನು, ಉತ್ತರಕ್ಕೆ-ಪುಟ್ಟಯ್ಯ ರವರ ಜಮೀನು, ದಕ್ಷಿಣಕ್ಕೆ-ಹೆಬ್ಬಳ್ಳ ಇರುತ್ತದೆ. ಸದರಿ ದಕ್ಷಿಣಕ್ಕೆ ಇರುವ ಹೆಬ್ಬಳ್ಳ ಸರ್ಕಾರಿ ಆಸ್ತಿಯಾಗಿರುತ್ತದೆ. ಅರಣ್ಯ ಜಮೀನು ಸರ್ವೆ ನಂಬರ್ 24 ರಲ್ಲಿ ಇರುತ್ತದೆ. ಸರ್ಕಾರಿ ಜಾಗವಾದ ಅರಣ್ಯ ಪ್ರದೇಶದಲ್ಲಿ ಮಾನವ ಮತ್ತ ಪ್ರಾಣಿಗಳ ಸಂಘರ್ಷವನ್ನು ತಪ್ಪಿಸಲು 1992-1993 ರಲ್ಲಿ ಆನೆ ಕಂದಕವನ್ನು ತೆಗೆದಿದ್ದರೂ ಎಂದರೆ

ಸರಿ. ನಾನು ಖರೀಸುವ ಪೂರ್ವದಲ್ಲಿ ಆನೆ ಕಂದಕವನ್ನು ಪರಿಶೀಲಿಸಿರುತ್ತೇನೆ. ಸರ್ವೆ ನಂಬರ್ 15 ರಲ್ಲಿ ನನಗೆ ಸೇರಿದ ಆಸ್ತಿ ಇರುತ್ತದೆ. ಸರ್ವೆ ನಂಬರ್ 15 ರಲ್ಲಿರುವ ಆಸ್ತಿ ಅರಣ್ಯ ವ್ಯಾಪ್ತಿಗೆ ಒಳಪಡುತ್ತದೋ ಅಥವಾ ಇಲ್ಲವೋ ಎಂಬುದರ ಬಗ್ಗೆ ಅರಣ್ಯ ಇಲಾಖೆಗೆ ನಿರಪೇಕ್ಷಣಾ ಪತ್ರವನ್ನು ಕೋರಿ ಪತ್ರ ಬರೆದಿದ್ದೆ ಎಂದರೆ ಸರಿ. ಸದರಿ ಪತ್ರದ ಆಧಾರದ ಅರಣ್ಯ ಇಲಾಖೆಯವರು ನನಗೆ ಸದರಿ ಸರ್ವೆ ನಂಬರ್.15 ರಲ್ಲಿರುವ ಆಸ್ತಿ ಸೂಕ್ಷ್ಮ ಪರಿಸರ ವಲಯದಲ್ಲಿದೆ ಎಂದು ಹಿಂಬರಹ ನೀಡಿರುತ್ತಾರೆ ಎಂದರೆ ಸರಿಯಲ್ಲ. ಯಾವ ಉದ್ದೇಶಕ್ಕಾಗಿ ನಿರಪೇಕ್ಷಣಾ ಪತ್ರ ಕೋರಿ ಸಲ್ಲಿಸಲಾಗಿದೆ ಎಂಬುದರ ಬಗ್ಗೆ ನಮೂದಿಸಿಲ್ಲ ಎಂದು ಸದರಿ ಪತ್ರವನ್ನು ವಿಲೆಗೊಳಿಸಿ ಮಾಹಿತಿ ಕೊಟ್ಟಿರುತ್ತಾರೆ ಎಂದರೆ ಸರಿ. ಜವರಯ್ಯ ಬಿನ್ ಜವರಯ್ಯ ಎಂಬ ವ್ಯಕ್ತಿ 1990 ರಲ್ಲಿಯೇ ಮೃತಪಟ್ಟಿದ್ದು, ನಾನು ಸರ್ಕಾರಿ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ಬೇರೊಬ್ಬ ವ್ಯಕ್ತಿಯನ್ನು ಜವರಯ್ಯ ಎಂದು ಹೇಳಿ ಉಪನೋಂದಣಾಧಿಕಾರಿಗಳ ಕಛೇರಿಗೆ ಕರೆದುಕೊಂಡು ಹೋಗಿ ಕ್ರಯ ಪತ್ರವನ್ನು ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. 2003-2004 ರಲ್ಲಿ ಸರ್ಕಾರಿ ಆಸ್ತಿ ಕಬಳಿಸಿದ ಬಗ್ಗೆ ದಿನಪತ್ರಿಕೆಯಲ್ಲಿ ಪ್ರಕಟವಾಗಿತ್ತು ಎಂದರೆ ಸರಿಯಲ್ಲ. ನನಗೆ ಮಾರಾಟ ಮಾಡಿದ ಜವರಯ್ಯ ರವರ ವಿಳಾಸ ನನಗೆ ಗೊತ್ತಿಲ್ಲ. ಅವರ ಮೃತ ಪಟ್ಟ ವಿಚಾರ ಗೊತ್ತಿದ್ದರೂ ಕೂಡ ಸರ್ಕಾರಿ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ಗೊತ್ತಿಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸರ್ವೆ ನಂಬರ್.6/5 ಪಿ ಗೆ ಸಂಬಂಧಿಸಿದ ಸರ್ವೆ ಸ್ಕೆಚ್ ಅನ್ನು ಹಾಜರುಪಡಿಸಿರುವುದಿಲ್ಲ. ಸರ್ವೆ ನಂಬರ್ 6/9 ಪಿ ಗೆ ಸಂಬಂಧಿಸಿದ ಆಸ್ತಿಯ ಪಶ್ಚಿಮ ಮತ್ತು ದಕ್ಷಿಣದ ಕಡೆ ಅರಣ್ಯ ಭೂಮಿ ಇರುತ್ತದೆ. ಸದರಿ ಆಸ್ತಿಯ ದಕ್ಷಿಣದ ಕಡೆ ತೆಗೆದಿರುವ ಆನೆ ಕಂದಕವನ್ನು ಕಬಳಿಸುವ ಉದ್ದೇಶದಿಂದ ಪ್ರತಿವಾದಿಗಳ ಮೇಲೆ ಸುಳ್ಳು ಆಪಾಧನೆ ಮಾಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿ. ನಾನು ಸರ್ಕಾರಿ ಅರಣ್ಯ ಭೂಮಿಯನ್ನು ಕಬಳಿಸುವ ಉದ್ದೇಶದಿದಂಧ ನೈಜ ಮಾಲೀಕರು ಮೃತಪಟ್ಟಿದ್ದರೂ ಕೂಡ

ಅವರು ಮೃತ ಪಟ್ಟ ನಂತರ ಬೇರೊಬ್ಬ ವ್ಯಕ್ತಿಯನ್ನು ಸೃಷ್ಟಿ ಮಾಡಿ ಮತ್ತು ನೈಜ ಮಾಲೀಕರು ತನ್ನ ಆಸ್ತಿಯನ್ನು ಗುರುತಿಸಿ ಕೊಡದೆ ಸುಳ್ಳು ಕ್ರಯ ಪತ್ರವನ್ನು ಸೃಷ್ಟಿ ಮಾಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅರಣ್ಯ ಅಧಿಕಾರಿಗಳು ನನ್ನ ಜಮೀನಿಗೆ ಬಂದು ಆನೆ ಕಂದಕವನ್ನು ತೆಗೆಯಲು ಪ್ರಯತ್ನಿಸಿತ್ತಾರೆಂದು ನಾನು ಪೋಲಿಸ್ ಠಾಣೆಗೆ ದೂರು ನೀಡಿಲ್ಲ. ಅರಣ್ಯ ಅಧಿಕಾರಿಗಳು ನನಗೆ ಸೇರಿದ ಯಾವ ಜಾಗದಲ್ಲಿ ಆನೆ ಕಂದಕವನ್ನು ತೆಗೆಯಲು ಪ್ರಯತ್ನಿಸಿರುತ್ತಾರೆ ಎಂದು ತೋರಿಸಲು ಭಾವ ಚಿತ್ರಗಳನ್ನು ಹಾಜರುಪಡಿಸಿಲ್ಲ. ಈ ದಾವೆ ಸಲ್ಲಿಸುವ ಪೂರ್ವದಲ್ಲಿ ಆನೆ ಕಂದಕವನ್ನು ಅಕ್ರಮವಾಗಿ ನನ್ನ ಜಮೀನಿನಲ್ಲಿ ತೆಗೆದಿರುತ್ತಾರೆ ಎಂದು ಪ್ರತಿವಾದಿಗಳಿಗೆ ದಾವಾ ಪೂರ್ವಭಾವಿ ನೋಟಿಸ್ ನೀಡಿರುವುದಿಲ್ಲ. ಪ್ರತಿವಾದಿಗಳು ಆನೆ ಕಂದಕವನ್ನು ತೆಗೆಯಲು ಪ್ರತಿಯತ್ನಿಸಿರುವ ಜಾಗದ ಭಾವ ಚಿತ್ರಗಳನ್ನು ಹಾಜರುಪಡಿಸಲು ನನಗೇನು ತೊಂದರೆ ಇಲ್ಲ. ಅರಣ್ಯ ಅಧಿಕಾರಿಗಳು ಆನೆ ಕಂದಕವನ್ನು ತೆಗೆಯಲು ಪ್ರಯತ್ನಿಸಿರುವ ಜಾಗ ಅರಣ್ಯ ವ್ಯಾಪ್ತಿಯ ಜಾಗದಲ್ಲಿ ಬರುತ್ತದೆಯೋ ಅಥವಾ ನನಗೆ ಸೇರುತ್ತದೆಯೋ ಎಂಬುವುದನ್ನು ಖಚಿತಪಡಿಸಿಕೊಳ್ಳಲು ನಾನು ಭೂ-ಮಾಪನ ಇಲಾಖೆಗೆ ಅರ್ಜಿ ನೀಡಿ ಸರ್ವೆ ಮಾಡಿಸಿರುವುದಿಲ್ಲ. ಸಾಕ್ಷಿ ಸ್ವತಃ ಮುಂದುವರಿದು ಪ್ರತಿವಾದಿಗಳು ಆ ರೀತಿ ಅರ್ಜಿ ಸಲ್ಲಿಸಲು ತನಗೆ ಸಮಯ ನೀಡಿರುವುದಿಲ್ಲ ಎಂದು ನುಡಿಯುತ್ತಾರೆ. ನಾನು ನ್ಯಾಯಾಲಯಕ್ಕೆ ದಾವೆ ಸಲ್ಲಿಸಿದ ನಂತರ ಇಲ್ಲಿಯವರೆಗೂ ನನ್ನ ಆಸ್ತಿಯ ವ್ಯಾಪ್ತಿಯನ್ನು ಗುರುತಿಸಿಕೊಳ್ಳಲು ಸರ್ವೆ ಇಲಾಖೆಗೆ ಅರ್ಜಿ ಸಲ್ಲಿಸಿರುವುದಿಲ್ಲ. ಒಂದು ವೇಳೆ ನಾನು ಸರ್ವೆ ಇಲಾಖೆಗೆ ಅರ್ಜಿ ಸಲ್ಲಿಸಿ ಸರ್ವೆ ಮಾಡಿಸಿದ್ದರೆ ನಾನು ಅರಣ್ಯ ಭೂಮಿಯನ್ನು ಒತ್ತುವರಿ ಮಾಡಿಕೊಂಡಿರುವ ವಿಚಾರ ಗೊತ್ತಾಗುತ್ತದೆ ಎಂಬ ಉದ್ದೇಶದಿಂದ ನಾನು ಅರ್ಜಿ ಸಲ್ಲಿಸಿರುವುದಿಲ್ಲ ಎಂದರೆ ಸರಿಯಲ್ಲ.

ನಿ.ಪಿ-13 ರ ಭಾವ ಚಿತ್ರದಲ್ಲಿರುವ ಜವರಯ್ಯ ಎಂಬ ವ್ಯಕ್ತಿ ಪ್ರಸ್ತುತವು ಕೂಡ ಹಿರೇನಂದಿ ಅಗನಹುಂಡಿ ಗ್ರಾಮದಲ್ಲಿ ವಾಸವಾಗಿದ್ದರೂ ಕೂಡ ಗ್ರಾಮ ಬಿಟ್ಟು ಕನಕಪುರಕ್ಕೆ

ಹೋಗಿರುತ್ತಾರೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಜವರಯ್ಯ ರವರನ್ನು ಈ ಪ್ರಕರಣದಲ್ಲಿ ಸಾಕ್ಷಿದಾರರನ್ನಾಗಿ ವಿಚಾರಣೆಗೊಳಪಡಿಸಿದರೆ ನನಗೇನು ತೊಂದರೆ ಇಲ್ಲ. ಸರ್ವೆ ನಂಬರ್ 6/5 ಪಿ, 6/3 ಪಿ, 6/4 ಪಿ ಮತ್ತು 6/9 ಪಿ ರ ಆಸ್ತಿಗಳು ಮೂಲತಃ ಸರ್ಕಾರದಿಂದ ಮಂಜೂರಾದ ಆಸ್ತಿಗಳಾಗಿರುತ್ತವೆ ಎಂದರೆ ಸರಿ. ಸರ್ವೆ ನಂಬರ್. 6 ರಲ್ಲಿ ಒಟ್ಟು 510 ಎಕರೆ ಜಮೀನು ಇರುತ್ತದೆ. ಸದರಿ 510 ಎಕರೆ ಜಮೀನಿನಲ್ಲಿ ಅರಣ್ಯ ಇಲಾಖೆಗೆ ಸೇರಿದ ಜಮೀನು ಕೂಡ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ.

ವಾದ ಪತ್ರ ತಯಾರಿಸಲು ನನ್ನ ವಕೀಲರಿಗೆ ನಾನೇ ಮಾಹಿತಿ ನೀಡಿರುತ್ತೇನೆ. ನನ್ನ ವಾದ ಪತ್ರದಲ್ಲಿ ಸರ್ವೆ ನಂಬರ್.6 ರಲ್ಲಿ ಸರ್ಕಾರಕ್ಕೆ ಸೇರಿದ 210 ಎಕರೆ ಜಮೀನು ಇರುತ್ತದೆ ಎಂದು ಬರೆಸಿರುತ್ತೇನೆ ಎಂದರೆ ಸರಿ. ನಾನು ವಾದ ಪತ್ರದಲ್ಲಿ ನಮೂದಿಸಿರುವ ದಾವಾ ಸ್ವತ್ತುಗಳಿಗೂ ಹಾಗೂ ಅರಣ್ಯ ಇಲಾಖೆಯವರು ತೆಗೆದಿರುವ ಆನೆ ಕಂದಕಕ್ಕೂ ಯಾವುದೇ ಸಂಬಂಧ ಇಲ್ಲದಿದ್ದರೂ ಅಕ್ರಮವಾಗಿ ಅರಣ್ಯ ಇಲಾಖೆಗೆ ಸೇರಿದ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ಈ ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಹಳೆ ಸರ್ವೆ ನಂಬರ್ 2004-2005 ರಲ್ಲಿ ಹೊಸ ಸರ್ವೆ ನಂಬರ್ ಗಳಾಗಿ ಬದಲಾಣೆಗಳಾಗಿರುತ್ತವೆ. ಹೊಸ ಸರ್ವೆ ನಂಬರ್ ಗಳಿಗೆ ಸಂಬಂಧಿಸಿದಂತೆ ಕಂದಾಯ ಪಾವತಿಸಿದ ಬಗ್ಗೆ ದಾಖಲೆಗಳನ್ನು ಹಾರುಪಡಿಸಿರುತ್ತೇನೆ. ಪಟ್ಟಾ ಬುಕ್ ಅನ್ನು ನನಗೆ 2003-2004 ರಂದು ನೀಡಿರುತ್ತಾರೆ. ನಿ.ಪಿ-30 ರಲ್ಲಿ 2016-2017 ನೇ ಸಾಲಿಗೆ ಎಂದು ನಮೂದಾಗಿರುತ್ತದೆ ಎಂದರೆ ಸರಿ. ನಾನು ಹಾರುಪಡಿಸಿರುವ ದಾಖಲೆಗಳು ಈ ಪ್ರಕರಣಕ್ಕಾಗಿ ಸೃಷ್ಟಿಸಿರುವಂತಹ ದಾಖಲೆಗಳಾಗಿರುತ್ತವೆ ಮತ್ತು ಪ್ರತಿವಾದಿಗಳಿಗೂ ಈ ದಾಖಲೆಗಳಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಾನು ದಾವಾ ಸ್ವತ್ತುಗಳನ್ನು ಖರೀದಿಸುವ ಪೂರ್ವದಲ್ಲಿ ಸರ್ಕಾರದ ಅನುಮತಿ ಪಡೆದಿರುವುದಿಲ್ಲ.

**O.S. No.  89 /2015**
**ಪಿ.ಡಬ್ಲ್ಯು-01 / ಡಿ.ಡಬ್ಲ್ಯು-01**

(ಈ  ಹಂತದಲ್ಲಿ ಮಾನ್ಯ ಸರ್ಕಾರಿ ವಕೀಲರು ಮುಂದಿನ ಪಾಟೀ ಸವಾಲಿಗೆ ಸಮಯ ಕೋರಿರುತ್ತಾರೆ.  ಸಮಯ ನೀಡಲಾಯಿತು.)

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸಾ ಸ ಇ ಒ.,**

**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ಹೆಗ್ಗಡದೇವನಕೋಟೆ.**